ಹಾಗೆಯೇ ಅರಿಯುವುದೇ, ಇರುವುದನ್ನು ಇರುವ ಹಾಗೆಯೇ ಒಪ್ಪಿಕೊಳ್ಳುವುದೇ ಬುದ್ಧತ್ವ ಎಂಬುದು ಅರಿವಾಯಿತು. ಆದರೆ ಮಧ್ಯಮ ಮಾರ್ಗದ ಮೂಲಕ ಸಿದ್ಧಿಸಿದ ಈ ಜ್ಞಾನದ ಪ್ರಭಾವವನ್ನು ಖಾತರಿಪಡಿಸಿಕೊಳ್ಳಲು ಮೊದಲು ಸಾಂಖ್ಯ ಕಲಿಸಿದ ಆರೂಢ ಕಲಮನ ಬಳಿಗೆ ಓಡೋಡಿ ಹೋದೆ. ಆದರೆ ಅವರಾಗಲೇ ಮರಣಿಸಿದ್ದರು. ನಂತರ ಸಮಾಧಿಯೋಗ ಕಲಿಸಿದ ಉದ್ಧಕ ರಾಮಪುತ್ತರ ಬಳಿ ಹೇಳಿ ಸ್ಥಿರೀಕರಿಸಿಕೊಳ್ಳಲು ಹೊರಟೆ. ಅವರೂ ಅಷ್ಟರಲ್ಲಿ ಮರಣ ಹೊಂದಿಬಿಟ್ಟಿದ್ದರು. ನಿನ್ನೆಯಿದ್ದವರು ಇಂದಿಲ್ಲ, ಇಂದಿದ್ದವರು ನಾಳೆಯಿಲ್ಲ. ಅಂದ ಮೇಲೆ ದುಃಖ ಪಡುವುದು ಏತಕ್ಕೆ? ಹೀಗೆ ನಾಳೆಯೂ ಇರಬೇಕೆಂದು ಬಯಸುವುದೇ ಆಸೆ. ಆ ಆಸೆಯನ್ನು ನಿವಾರಿಸಿಕೊಳ್ಳುವುದರಿಂದಲೇ ದುಃಖವನ್ನು ನಿವಾರಿಸಿಕೊಳ್ಳಬೇಕು. ಆ ನಿರೀಕ್ಷೆ ಇದ್ದರೆ ತಾನೇ ದುಃಖ? ನಿರೀಕ್ಷೆಯೇ ಇರದಿದ್ದರೇ? ದುಃಖವೇ ಇರುವುದಿಲ್ಲ!

ನನಗೆ ಹೊಳೆದ ಬೆಳಕಿಗೆ ಸಾಕ್ಷಿ ಸಿಕ್ಕಿತು. ಸತ್ಯಾರ್ಥ ಸತ್ಯವೆಂಬ ಅಂಶದ ಅರಿವಾಯಿತು. ಹೆಚ್ಚು ತಿಳಿದವರೆಂದುಕೊಂಡವರು ಆಗಲೇ ನಿಧನ ಹೊಂದಿಬಿಟ್ಟಿರುವುದರಿಂದ ಬದುಕಿರುವವರಲ್ಲಿ ಯಾರು ಹೆಚ್ಚು ತಿಳಿದವರು ಎಂಬುದನ್ನು ಹುಡುಕಬೇಕಷ್ಟೇ. ಅಂದರೆ ನನಗಿಂತ ಕಡಿಮೆ ತಿಳಿದವರಿಗಿಂತ ನಾನು ಹೆಚ್ಚು ತಿಳಿದಿರುವೆನೆಂದರ್ಥವೇ? ಸಾರಾನಾಥದಲ್ಲಿದ್ದ ಐವರು ಸಹವರ್ತಿಗಳಾದರೂ ಸಿಗುವರೇನೋ ಎಂದು ಅವರನ್ನು ಹುಡುಕಿಕೊಂಡು ಓಡೋಡಿ ಹೋದೆ. ನನಗೆ ಹೊಳೆದಿರುವ ಜ್ಞಾನವನ್ನು ಅವರಿಗೆ ಹೇಳಿ ಅದರ ಔನ್ನತ್ಯವೇನು ಎಂಬುದನ್ನು ಅರಿಯಬೇಕಿತ್ತು. ನನ್ನ ಉಪದೇಶದಿಂದ ಅವರಿಗೂ ಜ್ಞಾನದ ಬೆಳಕಿನ ದರ್ಶನವಾದರೆ ಮಾತ್ರ ನನ್ನ ಜ್ಞಾನೋದಯಕ್ಕೆ ಅರ್ಥ ಸಿಕ್ಕಂತಾಗುತ್ತದೆ ಎಂದು ಭಾವಿಸಿದೆ. ಅವರನ್ನು ಹುಡುಕಿಕೊಂಡು ಬಂದಿರುವೆನೆಂಬ ಗುಟ್ಟನ್ನು ಗೊತ್ತಾಗದಂತೆ ಕಾಪಾಡಿಕೊಂಡೆ. ಏಕೆಂದರೆ ಕಠೋರ ತಪವನ್ನು ಬಿಟ್ಟ ನಂತರ ಕಪಟ ಸನ್ಯಾಸಿಯೆಂದು ಜರಿದು ನನ್ನಿಂದ ದೂರಾಗಿದ್ದ ಸಹಯಾನಿಗಳವರು. ಆದರೆ ಅವರು ನನ್ನ ಕಣ್ಣಿನ ಹೊಳಪನ್ನು ಕಂಡೇ ನನಗೆ ಬುದ್ಧೋದಯವಾಗಿದೆಯೆಂದು ಅರಿತುಬಿಟ್ಟರು. ಏನು ಕಂಡುಹಿಡಿದೆ ಎಂದು ಪ್ರಶ್ನಿಸಿದರು.

'ಸರ್ವಸುಖಗಳನ್ನು ಬೆನ್ನು ಹತ್ತಿ ಹೋಗುವುದು, ಸರ್ವಸುಖಗಳನ್ನು ತೊರೆದು ಆತ್ಮಾಹುತಿ ಮಾಡಿಕೊಳ್ಳುವುದು ಎರಡೂ ಅತಿಗಳೇ. ಈ ಎರಡರ ಮಧ್ಯಮ ಮಾರ್ಗ ಏನು? ದುಃಖ ಯಾವುದು? ದುಃಖವನ್ನು ಕಳೆದುಕೊಳ್ಳುವ ಪರಿ ಯಾವುದು? ಎಂಬುದನ್ನೆಲ್ಲ ವಿವರಿಸಿದೆ. ಕಳ್ಳತನ ಮಾಡಬಾರದು, ಮತ್ತೊಬ್ಬರನ್ನು ಕೊಲ್ಲಬಾರದು, ಸುಳ್ಳನ್ನು ಹೇಳಬಾರದು, ಸುರೆ ಭಂಗಿ ಸೇವಿಸಬಾರದು, ವ್ಯಭಿಚಾರಿಯಾಗಬಾರದು ಇವೇ ಆ ಪಂಚಶೀಲಗಳು. ಅಲ್ಲದೆ ಅಷ್ಟಾಂಗ ಮಾರ್ಗಗಳನ್ನು, ಸನ್ಮಾರ್ಗ, ರತ್ನತ್ರಯ ಗುಣಗಳನ್ನು ವಿವರಿಸಿದೆ. ಇದರಲ್ಲಿ ಪರಿವ್ರಾಜಕರಿಗೆ ಯಾವುದು, ಸಂಸಾರಸ್ಥರಿಗೆ ಯಾವುದು ಎಂದು ಎರಡೂ ರೀತಿಯ ಜನಗಳಿಗೆ ಅನ್ವಯವಾಗುವ ವಿಧಾನಗಳನ್ನು ವಿವರಿಸಿದೆ. ಹೀಗೆ ಪಂಚಶೀಲ, ಅಷ್ಟಾಂಗಮಾರ್ಗ ಮುಂತಾದವನ್ನು ಪಾಲಿಸಿದರೆ ಮನೆಮನೆಯೂ, ಸಮಾಜವೂ ನೆಮ್ಮದಿಗೊಳಗಾಗುವುದು ಎಂದು ಹೇಳಿ, ನನಗೆ ಬೋಧವಾದುದನ್ನೆಲ್ಲ ಬಯಲಾಗಿಸಿರುವೆ, ಈ ದಾರಿ ಸಮ್ಮತವೇ ನಿಮಗೆ ಎಂದು ಕೇಳಿದೆ. ಅವರೈವರೂ, 'ಭಂತೇ, ಶರಣೆಂಬೆವು ನಿನಗೆ. ಈವರೆಗೆ ಯಾರೂ ಮನುಷ್ಯ ದುಃಖದ ಇರುವೇ ಧರ್ಮದ ಮೂಲ ಎಂದು ಹೇಳಲಿಲ್ಲ. ಯಾರೂ ದುಃಖದ ನಿರ್ವಹಣೆಯೇ ಧರ್ಮದ ಉದ್ದೇಶ ಎಂದು ಹೇಳಲಿಲ್ಲ. ಇಷ್ಟು ಸರಳವಾಗಿ ಯಾರೂ ಇದುವರೆಗೆ ಮುಕ್ತಿ ಮಾರ್ಗ ತೋರಿರಲಿಲ್ಲ. ಯಾರೂ ಇದುವರೆಗೆ ಪುನರ್ಜನ್ಮ, ಮರುಜನ್ಮಗಳಲ್ಲಲ್ಲದೇ ಇದೇ ಜನ್ಮದಲ್ಲಿ ಮುಕ್ತಿ ಮಾರ್ಗವಿರುವುದಾಗಿ ಹೇಳಿರಲಿಲ್ಲ. ಬುದ್ಧನೇ ನಿನಗೆ ಶರಣು, ನಿನ್ನ ಧರ್ಮಕ್ಕೆ ಶರಣು. ನಿನ್ನ ಅನುಯಾಯಿಗಳ ಸಂಘಕ್ಕೆ ಶರಣು' ಎಂದು ಮೊದಲ ಐವರನ್ನೊಳಗೊಂಡ ನಮ್ಮ ಸಂಘಕ್ಕೆ ಶರಣೆಂದು ಅವರೂ ಸೇರಿಕೊಂಡರು.

ಅಂದು ನಾನು ಅವರಿಗೆ ವಿಶ್ಲೇಷಿಸಿದ್ದೇ ನನ್ನ ಮೊದಲ ಪ್ರವಚನವಾಗಬಹುದೆಂದು ಊಹಿಸಿರಲಿಲ್ಲ. ಹೀಗೆ ಪ್ರವಚನವನ್ನು ಮಾಡುತ್ತಾ ಮಾಡುತ್ತ ನನಗೆ ನಾನೇ ಹೆಚ್ಚು ನಿಖರವಾಗುತ್ತಾ ಹೋಗುತ್ತಿದ್ದೆ. ಆ ಐವರೂ ನನ್ನ ಉಪದೇಶಗಳಿಗೆ ಶರಣಾಗತರಾದರು. 'ನಾವು ಏನು ಕಲಿತಿದ್ದೇವೋ ಅದು ಇಲ್ಲಿಯೇ ಪ್ರಸರಣವಾಗಬೇಕು. ಮುಂದಿನ ಜನ್ಮದಲ್ಲಿ ಸಾಧಿಸೋಣವೆಂಬುದೆಲ್ಲಾ ಸುಳ್ಳು. ಎಲ್ಲಿಯೂ ಮರುಹುಟ್ಟು ಎಂಬುದಿಲ್ಲ. ಈ ಜನ್ಮದಿಂದ ಮತ್ತೊಂದು ಜನ್ಮಕ್ಕೆ ಹಾರಿ ಹೋಗುವಂಥದ್ದು ಯಾವುದೂ ಇಲ್ಲ. ಎಲ್ಲಿಯೂ ದೇವರು ಎಂಬುದಿಲ್ಲ. ಆತ್ಮ ಪರಮಾತ್ಮ ಎಂಬುದೆಲ್ಲ ನಮ್ಮ ಭ್ರಮೆ. ನಮ್ಮ ಉದ್ಧಾರ ನಮ್ಮ ಕೈನಿಂದಲೇ ಆಗಬೇಕೇ ವಿನಾ ಬೇರೆಯವರಿಂದಲ್ಲ. ನಿಮ್ಮ ದೀವಟಿಗೆ ನೀವೇ ಆಗಬೇಕು. ಕತ್ತಲಲ್ಲಿ ಹೇಗೆ ಬೆಳಕನ್ನು ಅವಲಂಬಿಸುವಿರೋ ಹಾಗೇ ಸತ್ಯಕ್ಕೆ ಬದ್ಧರಾಗಿರಬೇಕು. ಸಹಾಯಕ್ಕಾಗಿ ನೀವು ನಿಮ್ಮಲ್ಲಲ್ಲದೇ ಬೇರೆಯವರಲ್ಲಿ ಕೈಚಾಚಬಾರದು.

'ಬುದ್ಧನಿಗೆ ಶರಣಾಗಿ, ಧರ್ಮಕ್ಕೆ ಶರಣಾಗಿ. ಬುದ್ಧನೇ ಧರ್ಮ, ಧರ್ಮವೇ ಬುದ್ಧ. ಅವೆರಡೂ ಒಂದೇ. ಬುದ್ಧ ಸದಾಕಾಲ ಬದುಕಿರಲು ಸಾಧ್ಯವಿಲ್ಲ. ಯಾವಾಗ ಧರ್ಮವನ್ನು ಹರಡುವಿರೋ ಆಗ ಬುದ್ಧ ಜೀವಂತವಾಗುತ್ತಾನೆ. ಎಲ್ಲಿಯವರೆಗೂ ಧರ್ಮವನ್ನು ಹರಡುತ್ತಿರುವಿರೋ ಅಲ್ಲಿಯವರೆಗೂ ಬುದ್ಧ ಜೀವಂತವಾಗಿರುತ್ತಾನೆ' ಎಂದು ಉಪದೇಶಿಸಿದೆ. ಮೊದಲ ಉಪದೇಶ ಪಡೆದ ಈ ಐವರೂ ಸಂತೃಪ್ತ ಮುಖಭಾವ ಹೊಂದಿದವರಂತೆ ಕಂಡುಬಂದರು. 'ನಾನು ಕಂಡ ಈ ಜ್ಞಾನ ನನ್ನೊಬ್ಬನಲ್ಲೇ ಐಕ್ಯವಾಗಬಾರದು. ಅದನ್ನು ನೂರಾರು ಜನರಿಗೆ, ಸಾವಿರಾರು ಜನರಿಗೆ ಪಸರಿಸಿ. ಯಾರಿಗೆ ಅವಶ್ಯಕತೆ ಇದೆಯೋ ಅವರು ಅಳವಡಿಸಿಕೊಳ್ಳಲಿ, ಯಾರಿಗೂ ಬಲವಂತ ಮಾಡಬೇಡಿ' ಎಂದು ತಿಳಿಹೇಳಿದೆ. ನೀವು ನನಗೆ ಶರಣಾಗಬೇಕೆಂದರೆ ಮೊದಲು ಸಂಘಕ್ಕೆ ಶರಣಾಗಿ. ಸಂಘಕ್ಕೆ ಶರಣೆಂದರೆ ಧರ್ಮಕ್ಕೆ ಶರಣೆಂದಂತೆ, ಧರ್ಮಕ್ಕೆ ಶರಣೆಂದರೆ ಬುದ್ಧನಿಗೆ ಶರಣೆಂದಂತೆ ಎಂದೆ.

## ದೇವದತ್ತ

ಸಿದ್ಧಾರ್ಥ ಗೋತಮ ಬೋಧಿಸತ್ವವನ್ನರಸಿ ಹೋಗಿ ಆರು ವರ್ಷ ಕಠಿಣವಾಗಿ ತಪಸ್ಸನ್ನಾಚರಿಸಿದನಂತೆ. ಮುಂದಿನ ನಾಲ್ಕು ವರುಷ ತಾನು ಜ್ಞಾನೋದಯದಿಂದ ಕಂಡುಕೊಂಡ ಸತ್ಯಗಳನ್ನೆಲ್ಲ ಜನಗಳಿಗೆ ಅರುಹುತ್ತಿರುವನೆಂದು ಕೇಳಿದ್ದೆ. ಅದೇನು ಜ್ಞಾನೋದಯವಾಗಿದೆಯೋ ಗೊತ್ತಿಲ್ಲ; ಏನು ಪ್ರಶ್ನೆ ಕೇಳಿದರೂ ಗೊತ್ತಿಲ್ಲ, ಗೊತ್ತಿಲ್ಲ ಎಂದೇ ಉತ್ತರಿಸುತ್ತಾನೆ! ಇವನ ನಡೆಯಿಂದ ಅನುಮಾನಗೊಂಡ ಕೋಸಲದ ರಾಜ ಪಸೇನದಿ ಇವನನ್ನು ತನ್ನ ಅರಮನೆಗೆ ಬರಹೇಳಿದ್ದ.

ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಎಂದು ತಮ್ಮದೇ ಸಂಘದ ಬಾಲಬಡುಕರನ್ನ ಹಿಂಬಾಲಕರನ್ನಾಗಿ ಮಾಡಿಕೊಂಡು ಅವರಿಂದ ಜೈಕಾರ ಹಾಕಿಸಿಕೊಳ್ಳುತ್ತಾ ಕೋಸಲಕ್ಕೆ ತೆರಳಿದ. ಕೋಸಲ, ರಾಮನು ಜನ್ಮತಳೆದ ಕೌಸಲ್ಯೆಯ ತವರೂರು. ಅಂಥ ನಾಡಿಗೆ ಹೋದಾಗಲೂ ಬುದ್ಧನಾದವನು ಸುಳ್ಳು ಹೇಳುವುದೇ?

ಪಸೇನದಿ ಕೇಳಿಯೇಬಿಟ್ಟ: 'ನಿನ್ನ ಬಗ್ಗೆ ಆಪಾದನೆ ಬಂದಿದೆ. ನೀನು ಇಷ್ಟು ವರ್ಷಗಳಿಂದ ಅನುಸರಿಸಿಕೊಂಡು ಬಂದಿರುವ ವೈದಿಕ ಧರ್ಮವನ್ನು ಹೀಯಾಳಿಸುತ್ತಿರುವೆಯಂತೆ' ಎಂದು. ನಗುವುದೊಂದನ್ನು ಮಾತ್ರ ಚೆನ್ನಾಗಿ ಕಲಿತಿದ್ದಾನೆ. ಏನು ಪ್ರಶ್ನೆ ಕೇಳಿದರೂ ನಗುವೊಂದೇ ಉತ್ತರ. ಪ್ರಶ್ನೆಗೆ ಉತ್ತರ ಗೊತ್ತಿಲ್ಲವೆಂದಾದರೆ ಮೌನ ವಹಿಸುವುದು ಇಲ್ಲವೇ ನಗುವುದು, ಇಷ್ಟೇ ಆತ ಕಲಿತಿರುವುದು. ಅದಕ್ಕೆ ಆತನ ಶಿಷ್ಯಂದಿರ ಪಟಾಲಂನ ಸಮಜಾಯಿಷಿಯೇನೆಂದರೆ, ಅದಕ್ಕೆ ಉತ್ತರಿಸುವ ಅಗತ್ಯ ತನಗೆ ಕಾಣುತ್ತಿಲ್ಲವೆಂದು ಅರ್ಥವಂತೆ!

ಪಸೇನದಿ ಮುಂದುವರೆದು ಕೇಳಿದ: 'ವೈದಿಕರ ನಂಬಿಕೆಯಂತೆ ದೇವನಿರುವನೇ?'

'ನನಗದು ತಿಳಿದಿಲ್ಲ...'

'ವೈದಿಕರು ಮುಂದಿನ ಜನ್ಮದ ಉನ್ನತಿಗಾಗಿ, ಈ ಜನ್ಮದ ಮೋಕ್ಷಕ್ಕಾಗಿ ಅಷ್ಟೊಂದು ಕಷ್ಟಪಡುತ್ತಿರುವರಲ್ಲ. ಹಾಗಾದರೆ ಪುನರ್ಜನ್ಮವುಂಟೇ?'

'ನನಗದರ ಅರಿವಿಲ್ಲ.'

'ಮತ್ತೆ, ಸಾವಿನನಂತರ ಮನುಷ್ಯನೇನಾಗುವನು?'

'ನನಗದರ ಅನುಭವವಾಗಿಲ್ಲ.'

'ಮತ್ತೆ, ಆತ್ಮ ಏನಾಗುವುದು?'

'ಗೊತ್ತಿಲ್ಲ'

'ಬಟ್ಟೆಯನ್ನು ಬದಲಾಯಿಸಿದಂತೆ ಆತ್ಮವೆನ್ನುವುದು ಈ ದೇಹದ ನಂತರ ಮತ್ತೊಂದು ದೇಹವನ್ನು ಸೇರುವುದೆಂದು ಹಿರಿಯರು ಹೇಳುತ್ತಾರಲ್ಲ? ಅದರ ಬಗ್ಗೆ?'

'ನಾನರಿಯೆ'.

'ಹೋಗಲಿ, ಸ್ವರ್ಗ ನರಕಗಳಿವೆಯೇ?'